S C.R.P.67

Form No.4<br>(Criminal)<br>Deposition<br>Sheets<br>(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 89/2021

**ಚಾ.ಸಾ.-21 ಫ್ರಾ.ಸಾ.-06**

| | |
|---|---|
| **ಸಾಕ್ಷಿದಾರರ ಹೆಸರು** | **ಕಿರಣ್ ಕುಮಾರ್** |
| **ತಂದೆಯ ಹೆಸರು** | **ಹೊನ್ನಗಿರಿಗೌಡ** |
| **ವಯಸ್ಸು** | **40 ವರ್ಷಗಳು** |
| **ಉದ್ಯೋಗ** | **ವ್ಯವಸಾಯ** |
| **ವಾಸ** | **ಎ.ಹುಲ್ಲಕೆರೆ ಗ್ರಾಮ,<br>ಕೊತ್ತತ್ತಿ , ಮಂಡ್ಯ** |

**ದಿನಾಂಕಃ 05.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ1ರವರ ಗಂಡ ನಾಗರಾಜು ರವರ ಪರಿಚಯವಿತ್ತು . ಆರೋಪಿತರು ಪರಿಚವಿದ್ದಾರೆ ಅವರು ನಮ್ಮ ಊರಿನವರು. ಈಗ ನನಗೆ ತೋರಿಸುತ್ತಿರುವ ನಿ.ಪಿ.6 ಮಹಜರ್ ನಲ್ಲಿರುವ ಸಹಿ ನನ್ನದು. ಸಾಕ್ಷಿ ಒಪ್ಪಿದ್ದರಿಂದ ನಿ.ಪಿ. 6(ಬಿ) ಎಂದು ಗುರುತಿಸಲಾಯಿತು. ನಿ.ಪಿ.7 ಭಾವಚಿತ್ರಗಳಲ್ಲಿ ನಾನು ಕಂಡು ಬರುತ್ತೇನೆ. ಕಿರಗಂದೂರಿನ ಇಟ್ಟಿಗೆ ಫ್ಯಾಕ್ಟರಿ ಬಳಿ ಸದರಿ ಭಾವಚಿತ್ರಗಳನ್ನು ತೆಗೆಯಲಾಗಿರುತ್ತದೆ. ಸುಮಾರು 5 ವರ್ಷಗಳ ಹಿಂದೆ ಭಾವಚಿತ್ರಗಳನ್ನು ತೆಗೆಯಲಾಗಿರುತ್ತದೆ. ಪೋಲಿಸರು ಆ ಜಾಗಕ್ಕೆ ಮಹಜರ್ ಗೆ ಬಂದಿದ್ದರು ಅವರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ಪೋಲಿಸರು ಆ ಜಾಗಕ್ಕೆ ಬಂದಿರುವ ಬಗ್ಗೆ ಸಹಿ ಮಾಡಲು ಕೇಳಿದ್ದಾರೆ ಆದ್ದರಿಂದ ಮಾಡಲಾಗಿದೆ. ನಿ.ಪಿ. 7 ಭಾವಚಿತ್ರದಲ್ಲಿ ಕಂಡು ಬರುವ ಮಹಿಳೆ ಯಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಅನಂತರ ಅವರು ಮೃತ ನಾಗರಾಜು ರವರ ಪತ್ನಿ ಅರುಣ ಎನ್ನುತ್ತಾರೆ.

ಸದರಿ ಸ್ಥಳವನ್ನು ಯಾರು ತೋರಿಸಿತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ವಿಚಾರಕ್ಕೆ ದಾಖಲೆ ಬರೆಲಾಗಿದೆ ಎಂದು ಗೊತ್ತಿಲ್ಲ. ನಾನು ದಾಖಲೆಯನ್ನು ಓದಿ ಸಹಿ ಮಾಡಿಲ್ಲ. ಆದ್ದರಿಂದ ಅದರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ.

2) ನಿ.ಪಿ.8 ರಲ್ಲಿ ಕೂಡ ನನ್ನ ಸಹಿ ಇದೆ . ಸಾಕ್ಷಿಯ ಸಹಿಯನ್ನು ನಿ.ಪಿ.8 ಬಿ ಎಂದು ಗುರುತಿಸಲಾಯಿತು.ನಿ.ಪಿ.9 ರ 2 ಭಾವಚಿತ್ರಗಳಲ್ಲಿ ನಾನು ಕಂಡು ಬರುತ್ತೇನೆ, ಉಗಳಲ್ಲಿ ಮೃತ ನಾಗರಾಜುರವರ ಪತ್ನಿ ಅರುಣರವರು ಕಂಡು ಬರುತ್ತಾರೆ. ಅಲ್ಲದೆ ಅಂದಾನಿ ಗೌಡರು ಕೂಡ ಕಂಡುಬರುತ್ತಾರೆ. ಸದರಿ ನಿ.ಪಿ.9 ಭಾವಚಿತ್ರಗಳನ್ನು 1 ನೇ ಆರೋಪಿಯ ಮನೆಯ ಬಳಿ ತೆಗೆಯಲಾಗಿರುತ್ತದೆ. ನಿ.ಪಿ.8 ರಲ್ಲಿನ ಸಹಿಯನ್ನು ಆರೋಪಿತರ ಮನೆಯ ಬಳಿ ಮಾಡಿದ್ದೇನೆ. ಇದನ್ನು ಕೂಡ 5 ವರ್ಷದ ಹಿಂದೆ ಸಹಿ ಮಾಡಿರುತ್ತೇನೆ. ಆರೋಪಿಯ ಮನೆಯ ಪಕ್ಕದಲ್ಲಿ ನಮ್ಮಜಮೀನು ಇರುತ್ತದ ಆದ್ದರಿಂದ ನಾನು ಹೋಗಿರುತ್ತೆನೆ. ಪೋಲಿಸರು ಮಹಜರ್ ಗೆ ಬಂದಿದ್ದರು. ಯಾವ ವಿಚಾರಕ್ಕೆ ಮಹಜರ್ ಗೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ.ನಿ.ಪಿ.8 ರ ಜಾಗವನ್ನು ಯಾರು ತೋರಿಸಿದ್ದಾರೆಂದು ಹಾಗೂ ಯಾವ ವಿಚಾರಕ್ಕೆಂದು ನನಗೆ ಗೊತ್ತಿಲ್ಲ. ನಿ.ಪಿ.8 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಪೋಲಿಸರ ಕೋರಿಕೆ ಮೇರೆಗ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು ನಿ.ಪಿ.6 ಮತ್ತು 8 ಕ್ಕೆ ಸಹಿಗಳನ್ನು 21.03.2021 ರಂದು ಮಾಡಿರುತ್ತೆನೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ . ನಿ.ಪಿ.6 ರಲ್ಲಿ ತೋರಿಸಿರುವ ಜಾಗದಲ್ಲಿ ಚಾಸಾ1 ರವರ ಗಂಡ ಮರದಿಂದ ಬಿದ್ದುದ್ದರಿಂದ ಪೋಲಿಸರು ಆ ವಿಚಾರವನ್ನು ತಿಳಿಸಿ ಮಹಜರ್ ಬರೆಯ ಹಾಜರಿರಲು ನನ್ನನ್ನು ಕೇಳಿಕೊಂಡರು ಆ ರೀತಿ ನಾನು ಒಪ್ಪಿ ಹಾಜರಿದ್ದ ಎಂದರೆ ಸರಿಯಲ್ಲ. ಚಾಸಾ–1 ರವರು ಪೋಲಿಸರಿಗೆ ಆರೋಪಿ–1 ರವರು ತನ್ನ

ಗಂಡನ್ನು ಕೆಲಸಕ್ಕೆ ಕರೆದುಕೊಂಡು ಬಂದು ತೆಂಗಿನಮರಕ್ಕೆ ಯಾವುದೇ ಸುರಕ್ಷತೆ ಕ್ರಮ ತೆಗೆದುಕೊಳ್ಳದೆ ಬಿದ್ದ ಕಾರಣ ಸದರಿ ಸ್ಥಳವನ್ನು ಅವರು ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಒಂದು ಕಡಿದ ತೆಂಗಿನ ಮರ ಇತ್ತು ಎಂದರೆ ಸರಿಯಲ್ಲ. ಪೋಲಿಸರು ಸ್ಥಳವನ್ನು ಪರಿಶೀಲಿಸಿ ಬೆ.8.00 ರಿಂದ 8.45 ವರೆಗೆ ನಿ.ಪಿ.6 ರಂತೆ ಮಹಜರ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿ.ಪಿ.6 ರ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.7 ರಂತೆ ಭಾವಚಿತ್ರಗಳನ್ನು ಕೂಡ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಅನಂತರ ಚಾಸಾ-1 ರವರು ಮತ್ತು ಅವರ ಮನೆಯವರಿಗೆ ಜಾತಿ ನಿಂದರೆ ಮಾಡಿ ಹಲ್ಲೆ ಮಾಡಿದ ಜಾಗವನ್ನು ತೋರಿಸುತ್ತೇನೆ ಎಂದು ಹೇಳಿ ಚಾಸಾ-1 ರವರು ಆರೋಪಿ-1 ರವರ ಮನೆಗೆ ನಮ್ಮನ್ನು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಚಾಸಾ-1 ರವರು 1 ನೇ ಆರೋಪಿಯ ಮನೆಯ ಬಳಿ ಕರೆದುಕೊಂಡು ಹೋಗಿ ಇಲ್ಲೆ ಹಲ್ಲೆ ಮಾಡಿದ ಜಾಗವೆಂದು ತೋರಿಸಿತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಿ.ಪಿ.8 ರಂತೆ ಮಹಜರ್ ಅನ್ನು ನನ್ನ ಸಮಕ್ಷಮ ಬರೆದರು ಎಂದರೆ ಸರಿಯಲ್ಲ. ನಾನು ಮಹಜರ್ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.9 ರಂತೆ ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

3. ನಾನು ಬಿ.ಎ.ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ವ್ಯವಹಾರ ಜ್ಞಾನ ಚೆನ್ನಾಗಿದೆ ಎಂದರೆ ಸರಿ . ನಾನು ದಾಖಲೆಗಳನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೆನೆ. ನಿ.ಪಿ.6 ಮತ್ತು 8 ಅನ್ನು ಓದಿ ತಿಳಿದುಕೊಂಡು ಸಹಿ ಮಾಡಲು ಏನು ತೊಂದರೆ ಇತ್ತು ಎಂದರೆ ಪೋಲಿಸರು ನಿಮಗೆ ಏನು ಆಗುವುದಿಲ್ಲ ಎಂದು ಸಹಿ ಮಾಡು ಎಂದರು ಆದ್ದರಿಂದ ಸಹಿ ಮಾಡಿರುತ್ತೇನೆ. ಪೋಲಿಸರು ನನಗೆ ಬೆದರಿಕೆ ಹಾಕಿ ಸಹಿ ಮಾಡಿಸಿಕೊಂಡಿರುವುದಿಲ್ಲ. ನಾನು ಆರೋಪಿತರ ಜೊತೆ ಚೆನ್ನಾಗಿ ಇದ್ದನೆ ಎಂದರೆ ಸರಿ . ಆರೋಪಿತರ ಜೋತೆ ನಾನು ಚೆನ್ನಾಗಿರುವುದಿಂದರ ನಿ.ಪಿ. 6 ಮತ್ತು 8 ಅಂಶಗಳು ತಿಳಿದ್ದರು ಕೂಡ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ 1 ರಿಂದ 3 ಪರ ವಕೀಲರಿಂದಃ**

ನನಗೆ ಪೊಲೀಸರು ನೋಟಿಸ್ ಕೊಟ್ಟರಿಲಿಲ್ಲ ಎಂದರೆ ಸರಿ . ಊರಿನಲ್ಲಿ ನಾಗರಾಜುರವರು ಅಪಘಾತಕ್ಕೆ ಒಳಪಟ್ಟು ತೀರಿಕೊಂಡಿರುತ್ತಾರೆ ಎಂದು ಗೊತ್ತಗಿರುತ್ತದೆ ಎಂದರೆ ಸರಿ .

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ